# 4

## ಮೂಲ ವಾಕ್ಯ: ವಿಮೋಚನಕಾಂಡ 12:1-30

# ಹಳೆಯ ಒಡಂಬಡಿಕೆಯಲ್ಲಿ ಮುಂತಿಳಿಸಲ್ಪಟ್ಟಿತ್ತು

ಹೊಸ ಒಡಂಬಡಿಕೆಯ ಅನೇಕ ಆಚರಣೆಗಳನ್ನು ಹಳೆಯ ಒಡಂಬಡಿಕೆಯಲ್ಲಿ ಮುಂತಿಳಿಸಲಾಗಿತ್ತು, ಅವುಗಳು ಹಳೇ ಒಡಂಬಡಿಕೆ "ಮಾದರಿ" (*ಟುಪೋಸ್*) "ಹೊಸ ಒಡಂಬಡಿಕೆ" ಮಾದರಿ ಪ್ರತಿ (*ಅಂತಿಟುಪೊಸ್*) ಆಗಿದ್ದವು.

ಆದಾಮನು ಯೇಸುವಿನ "ಮಾದರಿ" ಪ್ರತಿಯಾಗಿದ್ದನು (ರೋಮಾಪುರ 5:14). ಯೇಸು ಮಾದರಿ ಪ್ರತಿಯಾದನು. ನಾವೆಯ ನೀರಿನ ಮೂಲಕ ರಕ್ಷಿಸಲ್ಪಟ್ಟ ನೋಹನು, ದೀಕ್ಷಾಸ್ನಾನದ ಮಾದರಿ.

> ... ಇದಲ್ಲದೆ ಆತನು ಆತ್ಮರೂಪನಾಗಿ ಸೆರೆಯಲ್ಲಿದ್ದ ಆತ್ಮಗಳ ಬಳಿಗೆ ಅಂದರೆ ಪೂರ್ವಕಾಲದಲ್ಲಿ ನೋಹನು ನಾವೆಯನ್ನು ಕಟ್ಟಿಸುತ್ತಿರಲು ದೇವರು ದೀರ್ಘ ಶಾಂತಿಯಿಂದ ಕಾದಿದ್ದಾಗ ಆತನಿಗೆ ಅವಿಧೇಯರಾಗಿದ್ದವರ ಬಳಿಗೆ ಹೋಗಿ ಸುವಾರ್ತೆಯನ್ನು ಸಾರಿದನು. ಆ ನಾವೆಯೊಳಗೆ ಕೆಲವರು ಅಂದರೆ ಎಂಟೇ ಜನರು ಸೇರಿ ನೀರಿನ ಮೂಲಕ ರಕ್ಷಣೆಹೊಂದಿದರು. ಆ ನೀರಿಗೆ ಅನುರೂಪ ವಾದ ದೀಕ್ಷಾಸ್ನಾನವು ಯೇಸು ಕ್ರಿಸ್ತನ ಪುನರುತ್ಥಾನದ ಮೂಲಕ ಈಗ ನಮ್ಮನ್ನು ರಕ್ಷಿಸುತ್ತದೆ; ಅದು ಮೈಕೊಳೆಯನ್ನು ಹೋಗಲಾಡಿಸುವಂಥದಲ್ಲ, ಒಳ್ಳೇ ಮನಸ್ಸಾಕ್ಷಿ ಬೇಕೆಂದು ದೇವರಿಗೆ ವಿಜ್ಞಾಪಿಸಿಕೊಳ್ಳುವಂಥದ್ದೇ ... (1 ಪೇತ್ರ 3:20, 21; NKJV).

ನಾವೆಯು ಅವರನ್ನು ನೀರಿನಿಂದ ರಕ್ಷಿಸಿದ ದೈಹೀಕ ಮಾದರಿಯು ನಮ್ಮ (ಮಾದರಿ), ಅದು ಆತ್ಮೀಕ ಬಿಡುಗಡೆಯ ಛಾಯೆಯಾಗಿದೆ ಅದು ಇಂದಿಗೂ ನಮ್ಮನ್ನು ರಕ್ಷಿಸುತ್ತದೆ (ಮಾದರಿ ಪ್ರತಿ). ಇಸ್ರಾಯೇಲ್ಯರು ಸಾಯದಂತೆ ಬದುಕಲು ನೋಡುವದಕ್ಕಾಗಿ ಎತ್ತಲ್ಪಟ್ಟ ಸರ್ಪವು ಯೇಸುವಿನ ಮಾದರಿಯಾಗಿದೆ. ಯೇಸುವನ್ನು ನೋಡಿದವರಿಗೆ ನಿರಂತರ ಜೀವವಿದೆ (ಯೋಹಾನ 3:14, 15).

ನೆರಳು ನೀಡುವದಕ್ಕೆ ಮೊದಲು ಒಂದು ಮರವು ಬೆಳೆಯಲ್ಪಡಬೇಕು. ಇದೇ ರೀತಿಯಾಗಿ, ಹಳೆಯ ಒಡಂಬಡಿಕೆಯ ಸಂಗತಿಗಳು ಮೊದಲು ನೆರಳಾಗಿ ಉದ್ಭವಿಸಿದವು, ನಂತರ ಹೊಸ ಒಡಂಬಡಿಕೆಯ ಸಂಗತಿಗಳನ್ನು ಅವುಗಳು ನೆರವೇರಿಸಿದವು: ಹಳೆ ಒಡಂಬಡಿಕೆಯ ಸಂಗತಿಗಳ ಹೊಸ ಒಡಂಬಡಿಕೆಯ ಸತ್ಯಾಂಶಗಳ ಪ್ರಕಟನೆಯಾಗಿದ್ದವು, ಅವುಗಳು ಹೊಸ ಒಡಂಬಡಿಕೆಯ ಆತ್ಮೀಕ ವಿಚಾರಗಳಾಗಿದ್ದವು (ರೋಮಾಪುರ 2:29; 7:6; 2 ಕೊರಿಂಥ 3:6).

ಯೆಹೂದ್ಯರ ಅನೇಕ ಆಚಾರಗಳಲ್ಲಿ, ಮುಖ್ಯವಾಗಿ ಪಸ್ಕದ ಆಚರಣೆಯಲ್ಲಿ ಯಜ್ಞಗಳಲ್ಲಿ, ಒಡಂಬಡಿಕೆಗಳಲ್ಲಿ, ಮತ್ತು ಆಹಾರ ಪದ್ಧತಿಗಳಲ್ಲಿ ಕರ್ತನ ಭೋಜನದ ಚಿತ್ರಣಗಳನ್ನು ಗಮನಿಸುತ್ತೇವೆ.

### ಸ್ಮರಣೆಗಳು

ವಿಶೇಷ ಕಾರ್ಯಗಳನ್ನು ಹಳೆಯ ಒಡಂಬಡಿಕೆಯ ಜನರುಗಳು ನೆನಪು ಮಾಡಬೇಕೆಂದು ದೇವರು ಅನೇಕ ಸ್ಮರಣೆಗಳನ್ನು ಉಪಯೋಗಿಸಿದನು.

> ಘಟನೆಗಳನ್ನು ಹಾಗೂ ವ್ಯಕ್ತಿಗಳನ್ನು ಮರೆಯದಂತೆ ಸ್ಮರಣೆಗಳ ಏರ್ಪಾಟು ಮಾಡಲಾಗಿತ್ತು ...
>
> ಸ್ಮರಣೆಗಳು, ಘಟನೆಗಳ ನೆನಪು ಉಂಟು ಮಾಡುವದಿತ್ತು, ಇಲ್ಲವಾದರೆ ಅವುಗಳನ್ನು ಜನರು ಮರೆತುಬಿಡುತ್ತಿದ್ದರು.[1]

ಹಳೆ ಒಡಂಬಡಿಕೆಯಲ್ಲಿನ ಸ್ಮರಣಾರ್ಥದ ನಿದರ್ಶನಗಳು:

- ತಾನು ಇನ್ನೆಂದಿಗೂ ಪ್ರಳಯ ಉಂಟುಮಾಡುವದಿಲ್ಲವೆಂದು ಹೇಳಿ, ದೇವರು ಕಾಮನಬಿಲ್ಲನ್ನು ಗುರುತಾಗಿ ಇಟ್ಟನು (ಆದಿಕಾಂಡ 9:13-17). ಮಾನವರ ಹಾಗೂ ದೇವರ ನಡುವಿನ ಒಪ್ಪಂದದ ಗುರುತು ಕಾಮನಬಿಲ್ಲಾಗಿತ್ತು.
- ವಾರದ ಏಳನೆಯ ದಿನದಲ್ಲಿ ಇಸ್ರಾಯೇಲ್ಯರು ಸಬ್ಬತ್ತನ್ನು ಆಚರಿಸಬೇಕಿತ್ತು (ವಿಮೋಚನೆಕಾಂಡ 20:10; ಧರ್ಮೋಪದೇಶಕಾಂಡ 5:14). ಆಗ ಜನರು ತಾವು ಐಗುಪ್ತದ ದಾಸತ್ವದಿಂದ ಬಿಡುಗಡೆಯಾದವರು ಎಂದು ನೆನಪಿಸಬೇಕಿತ್ತು.
- ದೇವರು ತಮ್ಮ ಮಕ್ಕಳನ್ನು ಕೊಲ್ಲದೆ, ರಾತ್ರಿಯಲ್ಲಿ ಹಾದು ಹೋಗುವಾಗ ಇಸ್ರಾಯೇಲ್ಯರ ಮನೆ ಬಾಗಿಲುಗಳ ನಿಲುವು ಪಟ್ಟಿಗಳಿಗೆ ಹಚ್ಚಿದ ರಕ್ತವನ್ನು ಕಂಡು ಅವರನ್ನು ಪಾರುಮಾಡಿದ್ದರಿಂದ, ಅವರು ಪಸ್ಕ ಹಬ್ಬವನ್ನು ಆಚರಿಸಬೇಕಿತ್ತು. ಪಸ್ಕದ ಊಟವನ್ನು ಮಾಡುವಾಗ ಐಗುಪ್ತರ ದಾಸತ್ವದಿಂದ ವಿಮೋಚನೆ ಹೊಂದಿದ ಘಟನೆಯನ್ನು ಅವರು ಸ್ಮರಣೆ ಮಾಡಬೇಕಿತ್ತು.
- ಯೊರ್ದಾನ್ ಹೊಳೆಯನ್ನು ದಾಟಿದಾಗ, ಇಸ್ರಾಯೇಲ್ಯರು ಹನ್ನೆರಡು ಕಲ್ಲುಗಳನ್ನು ತಂದು, ಕುಪ್ಪೆಮಾಡಿ, ಅವರ ಬಿಡುಗಡೆಯನ್ನು ಸ್ಮರಣೆ ಮಾಡಬೇಕಿತ್ತು. ಇಸ್ರಾಯೇಲ್ಯರ ಯಾಜಕರು ದೇವರ ಮಂಜೂಷವನ್ನು ಹೊತ್ತು ಯೊರ್ದಾನ್ ಹೊಳೆಗೆ ಬಂದಾಗ, ಅಲ್ಲಿ ಹರಿಯುತ್ತಿದ್ದ ನೀರು ಹಿಂದಕ್ಕೆ ಸರಿದು ನಿಂತು ಹೋಯಿತು. ಈ ವಿಚಾರವನ್ನು ಅವರು ತಮ್ಮ ಮಕ್ಕಳಿಗೆ ತಿಳಿಸಬೇಕಿತ್ತು (ಯೆಹೋಶುವ 3:11-4:7).

ಹಳೆಯ ಒಡಂಬಡಿಕೆಯ ಘಟನೆಗಳಿಂದ ಇಸ್ರಾಯೇಲ್ಯರ ಪ್ರಮುಖವಾದ ಸಂಗತಿಗಳನ್ನು ನೆನಪು ಮಾಡಿಕೊಂಡರು. "ನನ್ನನ್ನು ನೆನಸಿಕೊಳ್ಳುವದಕ್ಕೋಸ್ಕರ ಇದನ್ನು ಮಾಡಿರಿ ಎಂದು ಹೇಳಿ ಯೇಸು ಕರ್ತನ ಭೋಜನದ ಆಚರಣೆಯನ್ನು ಮಾಡಿರಿ" ಅಂದನು (1 ಕೊರಿಂಥ 11:24; ನೋಡಿರಿ ವಚನ 25).

## ಯಜ್ಞಗಳು

ಯೇಸುವಿನ ಯಜ್ಞವನ್ನು ಮುಂತಿಳಿಸುವ ಯಜ್ಞಗಳನ್ನು ಧರ್ಮಶಾಸ್ತ್ರವು ಮುಂತಿಳಿಸಿತ್ತು.

> ಧರ್ಮಶಾಸ್ತ್ರದಲ್ಲಿ ಮುಂದೆ ಬರಬೇಕಾಗಿದ್ದ ಮೇಲುಗಳ ಛಾಯೆಯೇ ಹೊರತು ಅವುಗಳ ನಿಜ ಸ್ವರೂಪವಲ್ಲವಾದದರಿಂದ ಆ ಧರ್ಮಶಾಸ್ತ್ರವು ವರುಷ ವರುಷಕ್ಕೆ ಪದೇ ಪದೇ ಅರ್ಪಿತವಾಗುವ ಒಂದೇ ವಿಧವಾದ ಯಜ್ಞಗಳನ್ನು ಅರ್ಪಿಸಿ ದೇವರ ಸಮೀಪಕ್ಕೆ ಬರುವವರನ್ನು ಎಂದಿಗೂ ಸಿದ್ಧಿಗೆ ತರಲಾರದು (ಇಬ್ರಿಯ 10:1).

ಧರ್ಮಶಾಸ್ತ್ರದ ಪ್ರಕಾರವಾದ ಯಜ್ಞಗಳು ಜನರು ತಮ್ಮ ಪಾಪಗಳನ್ನು ನೆನಪು ಮಾಡುವಂತೆ ಮಾಡಿದವು. "ಆದರೆ ಆ ಯಜ್ಞಗಳಿಂದ ಪ್ರತಿವರುಷದಲ್ಲಿಯೂ ಪಾಪಗಳ ಜ್ಞಾಪಕವಾಗುವದುಂಟು; ಹೋರಿಗಳ ಮತ್ತು ಹೋತಗಳ ರಕ್ತದಿಂದ ಪಾಪಗಳು ಪರಿಹಾರವಾಗುವದು ಅಸಾಧ್ಯವಾಗಿದೆಯಲ್ಲಾ" (ಇಬ್ರಿಯ 10:3). ಕರ್ತನ ಭೋಜನವನ್ನು

ನಾವುಗಳು ಮಾಡುವಾಗ ಇದೇ ವಿಧವಾದ ನೆನಪುಗಳು ನಮಗೂ ಉಂಟಾಗುತ್ತವೆ. ನಮ್ಮ ಪಾಪಗಳನ್ನು ಆತನು ದೂರ ಮಾಡಿದನು ಎಂದು ನೆನಪು ಮಾಡಿಕೊಳ್ಳುತ್ತೇವೆ (ಮತ್ತಾಯ 26:26-28; 1 ಕೊರಿಂಥ 11:23-25).

## ಒಂದು ಒಪ್ಪಂದ

ಇಸ್ರಾಯೇಲ್ಯರು ಐಗಪ್ತವನ್ನು ಬಿಟ್ಟು ಬಂದ ಕೇಲವೇ ದಿವಸಗಳಲ್ಲಿ ದೇವರು ದಶಾಜ್ಞೆಗಳನ್ನು ಒಳಗೊಂಡ ಮೊದಲನೆಯ ಒಡಂಬಡಿಕೆಯನ್ನು ಇಸ್ರಾಯೇಲ್ಯರಿಗೆ ನೀಡಿದನು. ಒಡಂಬಡಿಕೆಯ ಮುಖ್ಯಾಂಶವಾದ ದಶಾಂಶಗಳನ್ನು ದೇವರು ಕಲ್ಲಿನ ಹಲಗೆಗಳ ಮೇಲೆ ಬರೆದಾಗ, ಮೋಶೆ ಅವುಗಳನ್ನು ಮಂಜೂಷದೊಳಗೆ ಇಟ್ಟನು.

ಮೊದಲನೆಯ ಒಪ್ಪಂದವು ಪರಿ ಪೂರ್ಣವಾದ ಕರುಣೆ ಹಾಗೂ ಪಾಪಕ್ಷಮೆಯನ್ನು ನೀಡದೆ ಹೋದದ್ದರಿಂದ, ಅವುಗಳನ್ನು ಹೊಂದಿದ್ದ ಎರಡನೆಯ ಒಡಂಬಡಿಕೆಯನ್ನು ನೀಡಿದನು (ಇಬ್ರಿಯ 8:7, 8, 12, 13). ಯೆರೆಮೀಯನು ಪ್ರವಾದಿಸಿ,

> "ಯೆಹೋವನು ಇಂತೆನ್ನುತ್ತಾನೆ," ಇಗೋ, "ನಾನು ಇಸ್ರಾಯೇಲ್ ವಂಶದವರೊಂದಿಗೂ ಯೆಹೂದ ವಂಶದವರೊಂದಿಗೂ ಹೊಸದಾಗಿರುವ ಒಂದು ಒಡಂಬಡಿಕೆಯನ್ನು ಮಾಡಿಕೊಳ್ಳುವ ದಿನಗಳು ಬರುವವು; ಈ ಒಡಂಬಡಿಕೆಯು ನಾನು ಇವರ ಪಿತೃಗಳನ್ನು ಕೈ ಹಿಡಿದು ಐಗುಪ್ತ ದೇಶದೊಳಗಿಂದ ಕರತಂದಾಗ ಅವರ ಸಂಗಡ ಮಾಡಿಕೊಂಡ ಒಡಂಬಡಿಕೆಯಂಥದಲ್ಲ; ನಾನು ಅವರಿಗೆ ಪತಿಯಾಗಿದ್ದರೂ ಆ ನನ್ನ ಒಡಂಬಡಿಕೆಯನ್ನು ಅವರು ಮೀರಿದರಷ್ಟೆ" (ಯೆರೆಮೀಯ 31:31, 32ಎ).

ಹೊಸ ಒಡಂಬಡಿಕೆಗೆ ಮಧ್ಯಸ್ಥಗಾರನಾದ ಯೇಸು (ಇಬ್ರಿಯ 12:24), "ಮೊದಲನೆಯದನ್ನು ನಾಶಮಾಡಿ ಎರಡನೆಯದನ್ನು ಸ್ಥಾಪಿಸಿದನು" (ಇಬ್ರಿಯ 10:9).

ಈ ಎರಡು ಒಡಂಬಡಿಕೆಗಳು ಸಹ "ರಕ್ತದಿಂದಲೇ ಸ್ಥಾಪಿತವಾದವು" (ವಿಮೋಚನಕಾಂಡ 24:5-8; ಇಬ್ರಿಯ 9:18-20). ಪ್ರಾಣಿಗಳ ರಕ್ತವು ಯೇಸುವಿನ ರಕ್ತಕ್ಕೆ ಹೋಲಿಕೆಯಾಗಿದೆ. ಈ ಯೇಸುವಿನ ರಕ್ತವು ಕರುಣೆ ಹಾಗೂ ಪಾಪಕ್ಷಮೆಯ ಹೊಸ ಒಡಂಬಡಿಕೆ ಉಂಟಾಯಿತು (ಮತ್ತಾಯ 26:28). ಈ ಒಡಂಬಡಿಕೆಯಲ್ಲಿ, ಯೇಸುವಿಗೆ ವಿಧೇಯರಾಗುವವರಿಗೆ ಪಾಪಕ್ಷಮೆಯಿದೆ. ಯೇಸು ತನ್ನ ರಕ್ತದ ಮೂಲಕವಾಗಿ ನಮ್ಮ ಪಾಪವನ್ನು ಕ್ಷಮಿಸಿ, ಅವುಗಳನ್ನು ಇನ್ನೆಂದಿಗೂ ನೆನಪು ಮಾಡುವದಿಲ್ಲ (ಇಬ್ರಿಯ 8:12).

## ದೇವರ ರಾಜ್ಯದ ಔತಣ

ರಾಜ ಪಂಕ್ತಿಯಲ್ಲಿ ಕೂತು, ಕರೆದವರ ಸಂಗಡ ಊಟ ಮಾಡುವದು ಸನ್ಮಾನಕ್ಕೆ ಯೋಗ್ಯವಾದದ್ದು. ಮೆಫ್ತಿ ಬೋಷೇತವನ್ನು, ದಾವೀದನ ತನ್ನ ಪಂಕ್ತಿಯಲ್ಲಿ ಕಳ್ಳಿರಿಸಿಕೊಂಡನು (2 ಸಮುವೇಲ 9:6-10). ಬರ್ಜಿಲ್ಲೆಯ ದಾವೀದನಿಗೆ ಸಹಾಯ ಮಾಡಿದ್ದರಿಂದ, ಸೊಲೋಮೋನನು ಬರ್ಜಿಲ್ಲೆಯ ಮಕ್ಕಳನ್ನು ತನ್ನ ರಾಜ ಪಂಕ್ತಿಯಲ್ಲಿ ಕುಳ್ಳಿರಿಸಿಕೊಂಡನು (1 ಅರಸು 2:7). ಅನೇಕರು ಸೊಲೋಮೋನನಿಂದ ಇಂತಹ ಔತಣವನ್ನು ಹೊಂದಿದರು (ನೋಡಿರಿ 1 ಅರಸು 4:27). ಬಾಬೇಲಿನ ದುಷ್ಟನಾದ ಮರ್ದೋಕನು, ಸೆರೆಮನೆಯಲ್ಲಿದ್ದ ಯೆಹೂಯಾಕೀನನ್ನು ತನ್ನ ಪಂಕ್ತಿಗೆ ಆಹ್ವಾನಿಸಿ, ಅವನನ್ನು ಗೌರವಿಸಿದನು (2 ಅರಸು 25:29; ಯೆರೆಮೀಯ 52:33).

ಕರ್ತನ ಮೇಜಿನಲ್ಲಿರುವ ರೊಟ್ಟಿ ಮತ್ತು ದ್ರಾಕ್ಷಾರಸದಲ್ಲಿ ಪಾಲುಗಾರರಾಗುವದರಿಂದ ಗೌರವ ಉಂಟಾಗುತ್ತದೆ. ನಮ್ಮ ಪರವಾಗಿ ಕ್ರಿಸ್ತನ ಬಾಧೆಗಳನ್ನು ನೆನಪು ಮಾಡುವವರ ಸಂಗಡ ಕೂತು ಪಾಲುಗಾರರಾಗುವದು ಪರಲೋಕದ ಔತಣವಾಗಿದೆ (ನೋಡಿರಿ ಫಿಲಿಪ್ಪಿ

3:20). ಪಾಲುಗಾರರಾಗುವವರು ಧನ್ಯರು ಏಕೆಂದರೆ, ಅವರು ಇತರರೊಂದಿಗೆ ಅನ್ಯೋನ್ಯತೆ ಹೊಂದುತ್ತಾರೆ. ಆಗ ಅವರೊಂದಿಗೂ ಕರ್ತನು ಸಹ ಪ್ರಸನ್ನನಾಗಿರುತ್ತಾನೆ (ಮತ್ತಾಯ 26:29; ಲೂಕ 22:30; ನೋಡಿರಿ ಮಾರ್ಕ 14:25; 1 ಕೊರಿಂಥ 10:21).

## ಸಾರಾಂಶ

ಹಳೆಯ ಒಡಂಬಡಿಕೆಯಲ್ಲಿನ ಆಚರಣೆಗಳು ಹೊಸ ಒಡಂಬಡಿಕೆಯಲ್ಲಿನ ಸತ್ಯ ಸಾರಾಂಶವಾಗಿವೆ. ಇವುಗಳಲ್ಲಿ ಕೆಲವು ಕರ್ತನ ಭೋಜನದ ಗುರುತುಗಳಾಗಿವೆ. ಇವುಗಳಿಂದ ಅದರ ಅರ್ಥವನ್ನು ಗ್ರಹಿಸಲು ಸಾಧ್ಯವಾಗುತ್ತದೆ.

---

**ಟಿಪ್ಪಣಿ**

[1]Guy B. Funderburk, “Memorial, Memory,” *The Zondervan Pictorial Encyclopedia of the Bible,* ed. Merrill C. Tenney (Grand Rapids, Mich.: Zondervan Publishing House, 1975), 4:179.

## ಪಸ್ಕದ ಹಬ್ಬ ಒಂದು ಛಾಯೆ

ಕರ್ತನ ಭೋಜನವನ್ನು ಪಸ್ಕ ಹಬ್ಬಕ್ಕೆ ಹೋಲಿಕೆ ಮಾಡುವಾಗ, ಈ ಕೆಳಕಂಡ ಅಂಶಗಳನ್ನು ಗ್ರಹಿಸಬಹುದು.

**ಹೋಲಿಕೆ**

| *ಪಸ್ಕ ಹೋಲಿಕೆ* | *ಕರ್ತನ ಭೋಜನ* |
|---|---|
| ಜನರು ಸೇರುವಾಗ ಈ ಕಾರ್ಯ ನಡೆಯುತ್ತಿತ್ತು (ವಿಮೋಚನಕಾಂಡ 12:3, 4). | ಸಭೆಯವರು ಇದನ್ನು ಮಾಡುತ್ತಿದ್ದರು (1 ಕೊರಿಂಥ 11:33). |
| ದೇವರು ಪ್ರೀತಿಯ ಪ್ರತೀತ (ಹೋಶೆಯ 11:1). | ಪ್ರೀತಿಯ ಪ್ರತೀತ (ಪ್ರಕಟನೆ 1:5). |
| ಕಲ್ಮಶವಿಲ್ಲದ ಕಾಣಿಕೆ (ವಿಮೋಚನಕಾಂಡ 12:5). | ಯೇಸು ಕಲ್ಮಶವಿಲ್ಲದವನು (2 ಕೊರಿಂಥ 5:21; ಇಬ್ರಿಯ 4:15; 1 ಪೇತ್ರ 1:19). |
| ಗಂಡಾದ ಪ್ರಾಣಿ ಕೊಲ್ಲಲ್ಪಟ್ಟಿತು (ವಿಮೋಚನಕಾಂಡ 12:5). | ಯೇಸು ಸಹ ಪುರುಷನಾಗಿ ಕೊಲ್ಲಲ್ಪಟ್ಟನು (ಮತ್ತಾಯ 1:21-25). |
| ರಕ್ತದ ಮೂಲಕ ಜೀವನೀಡಲು ಮರಣ ಉಂಟಾಯಿತು (ವಿಮೋಚನಕಾಂಡ 12:7, 13). | ಜೀವ ನೀಡಲು ಯೇಸು ಮರಣ ಹೊಂದಿದನು (ಯೋಹಾನ 6:54; ರೋಮಾಪುರ 5:10). |
| ನಿಗಧಿತ ದಿನದಲ್ಲಿ ಆಚರಿಸಲಾಯಿತು (ವಿಮೋಚನಕಾಂಡ 12:6; ಅರಣ್ಯಕಾಂಡ 9:2-5). | ನಿಗಧಿತ ದಿನದಲ್ಲಿ ಆಚರಿಸಲಾಯಿತು (ಅಪೊಸ್ತಲರ ಕೃತ್ಯಗಳು 20:7). |
| ಹಬ್ಬದ ದಿನದಲ್ಲಿ ಹುಳಿಯಿಲ್ಲದ ರೊಟ್ಟಿಯನ್ನು ಬಳಸಲಾಯಿತು (ವಿಮೋಚನಕಾಂಡ 12:8). | ನಿಗಧಿತ ದಿನದಲ್ಲಿ ಆಚರಿಸಲಾಯಿತು (1 ಕೊರಿಂಥ 5:8). |
| ಬಿಡುಗಡೆಗಾಗಿ ರಕ್ತ ಸುರಿಸಲಾಯಿತು (ವಿಮೋಚನಕಾಂಡ 12:13). | ಪಾಪ ಕ್ಷಮೆಗಾಗಿ ರಕ್ತ ಸುರಿಸಲಾಯಿತು (ಮತ್ತಾಯ 26:28). |
| ಪ್ರಥಮವಾಗಿ ಹುಟ್ಟಿದ ಚೊಚ್ಚಲ ಮಗನನ್ನು ಮರಣದಿಂದ ರಕ್ಷಿಸಲು ರಕ್ತ ಸುರಿಸಲಾಯಿತು (ವಿಮೊಚನಕಾಂಡ 12:12, 13). | ಪ್ರಥಮ ಆಧಿ ಸಭೆಗಾಗಿ ರಕ್ತ ಸುರಿಸಲಾಯಿತು (ಇಬ್ರಿಯ 12:23; ಅಪೊಸ್ತಲರ ಕೃತ್ಯಗಳು 20:28). |
| ದೇವರು ಮಾಡಿದ ಕಾರ್ಯಗಳನ್ನು ನೆನಪುಮಾಡುವ ಸಲುವಾಗಿ ಕರ್ತನ ಭೋಜನ ಮಾಡಿದರು (ವಿಮೋಚನಕಾಂಡ 12:14). | ಯೇಸುವಿನ ನೆನಪಿನಲ್ಲಿ ಯಜ್ಞ ಉಂಟಾಯಿತು (1 ಕೊರಿಂಥ 11:24, 25). |
| ಪುನರಾವರ್ತಿಸಬೇಕು (ವಿಮೋಚನಕಾಂಡ 12:14, 17, 24). | ನೆನಪು ಮುಂದುವರೆಯಿತು (1 ಕೊರಿಂಥ 11:26). |
| ಇತರರು ಕುರಿಮರಿಯನ್ನು ಯಜ್ಞಮಾಡಿದರು (ವಿಮೋಚನಕಾಂಡ 12:21-23). | ನೆನಪು ಮುಂದುವರೆಯಿತು (ಅಪೊಸ್ತಲರ ಕೃತ್ಯಗಳು 2:23). |
| ದೇವ ಜನರ ಹೊರತಾಗಿ, ಸುನ್ನತಿಯಿಲ್ಲದವರು ಈ ಆಚರಣೆ ಮಾಡಬಾರದಿತ್ತು (ವಿಮೋಚನಕಾಂಡ 12:42-48). | ಆತ್ಮೀಕ ಸುನ್ನತಿ ಹೊಂದಿದವರಿಗೆ (ಕೊರಿಂಥ 2:11-13). |
| ಯಜ್ಞ ಪಶುವಿನ ಯಾವುದೇ ಎಲುಬನ್ನಾದರೂ ಮೋಶೆಯ ಮುರಿಯಲಿಲ್ಲ (ವಿಮೋಚನಕಾಂಡ 12:46). | ಯೇಸು ಮರಣ ಹೊಂದಿದಾಗ, ಆತನ ಯಾವುದೇ ಎಲುಬುಗಳು ಮುರಿಯಲ್ಪಡಲಿಲ್ಲ (ಯೋಹಾನ 19:32, 33). |

**ವ್ಯತ್ಯಾಸಗಳು**

| | |
|---|---|
| ದೈಹೀಕ ಕುಟುಂಬಗಳಿಗೆ ಮಾತ್ರ ಮೀಸಲು (ವಿಮೋಚನಕಾಂಡ 12:3). | ಆತ್ಮೀಕ ಕುಟುಂಬಕ್ಕಾಗಿ (1 ಕೊರಿಂಥ 10:17). |
| ಪ್ರತಿ ಕುಟುಂಬಕ್ಕೆ ಒಂದರಂತೆ ಅನೇಕ ಕುರಿಮರಿಗಳು ಕೊಯ್ಯಲ್ಪಟ್ಟವು (ವಿಮೋಚನಕಾಂ 12:3). | ಒಂದೇ ಒಂದು ಯಜ್ಞ (ಇಬ್ರಿಯ 7:27; 9:24-28; 10:10, 12, 14). |
| ದೇವ ಜನರು ತಮ್ಮ ಮನೆಯ ನಿಲುವು ಪಟ್ಟಿಗಳಿಗೆ ರಕ್ತವನ್ನು ಹಚ್ಚಿದು (ವಿಮೋಚನಕಾಂಡ 12:7, 21, 22). | ರೋಮಾಪುರ ಸೈನಿಕರು ಯೇಸುವಿನ ರಕ್ತವನ್ನು ಸುರಿಸಿದರು (ಯೋಹಾನ 19:34). |
| ಮೂರನೆಯ ದಿನದವರೆಗೆ ಉಳಿಸದಂತೆ, ರಾತ್ರಿಯಲ್ಲಿ ಅದನ್ನು ಪೂರ್ಣವಾಗಿ ಊಟ ಮಾಡಬೇಕಿತ್ತು (ವಿಮೋಚನಕಾಂಡ 12:8-10). | ಕೊಲ್ಲಲ್ಪಟ್ಟ ದೇವರ ಕುರಿಮರಿಯನ್ನು (1 ಯೋಹಾನ 1:29), ರೊಟ್ಟಿ ಮುರಿಯುವದರ ಮೂಲಕ ಆತನು ಬರುವರೆಗೆ ಪುನಃ ಪುನಃ ನೆನಪು ಮಾಡಬೇಕಿತ್ತು (1 ಕೊರಿಂಥ 11:23-25). |
| ದೇವರು ಮಾಡಿದ ಹಿಂದಿನ ಕಾರ್ಯಗಳ ನೆನಪು ಮಾತ್ರ (ವಿಮೋಚನಕಾಂಡ 12:14). | ಯೇಸುವಿನ ಮರಣದ ನೆನಪು ಹಾಗೂ ಆತನಬರೋಣದ ನಿರೀಕ್ಷೆ (1 ಕೊರಿಂಥ 11:23-26). |
| ಹಬ್ಬದ ಮೊದಲನೆಯ ಹಾಗೂ ಕಡೇಯ ದಿವಸಗಳಲ್ಲಿ ಯಾವದೇ ಕೆಲಸಗಳನ್ನು ಮಾಡಬಾರದಿತ್ತು (ವಿಮೋಚನಕಾಂಡ 12:16; ಧರ್ಮೋಪದೇಶಕಾಂಡ 16:8). | ಕೆಲಸದ ಕುರಿತ ಯಾವುದೇ ನಿಯಮಗಳಲ್ಲ. |
| ಕುರಿಮರಿಯ ರಕ್ತವನ್ನು ದೇವರು ಗಮನಿಸಿದಾಗ ಚೊಚ್ಚಲಾದವುಗಳನ್ನು ಆತನು ಕೊಲ್ಲುತ್ತಿರಲಿಲ್ಲ (ವಿಮೋಚನಕಾಂಡ 12:12, 13, 23). | ಯೇಸುವಿನ ರಕ್ತ ಪಾಪಕ್ಷಮೆಯನ್ನು ನೀಡಿ, ಹೊಸ ಒಡಂಬಡಿಕೆಯನ್ನು ಪ್ರತಿಷ್ಟಿಸಿತು(ಮತ್ತಾಯ 26:28). |
| ಕುರಿಮರಿಯ ಮರಣವನ್ನು ಹೊರತು ಪಡಿಸಿ, ದೇವರ ಕ್ರಿಯೆಯ ನೆನಪನ್ನು ಮಾತ್ರ ಮಾಡಬೇಕಿತ್ತು (ವಿಮೋಚನಕಾಂಡ 12:42). | ಯೇಸುವನ್ನು ಮತ್ತು ಆತನ ಮರಣದ ನೆನಪು (1 ಕೊರಿಂಥ 11:23-26). |
| ದೇವರು ತಿಳಿಸಿದ ಸ್ಥಳದಲ್ಲಿ ಅದನ್ನು ಆಚರಿಸಬೇಕಿತ್ತು (ಧರ್ಮೋಪದೇಶಕಾಂಡ 16:5, 6). | ಯಾವುದೇ ವಿಶೇಷ ಸ್ಥಳವಿರಲಿಲ್ಲ (ಯೋಹಾನ 4:21). |
| ವರ್ಷಕೊಂದಾವರ್ತಿ, ಒಂದು ವಾರದ ಕಾಲ ಆಚರಿಸುತ್ತಿದ್ದರು (ಧರ್ಮೋಪದೇಶಕಾಂಡ 16:1, 8). | ವಾರದ ಮೊದಲನೆಯ ದಿನ ಆಚರಿಸಿದರು (ಅಪೊಸ್ತಲರ ಕೃತ್ಯಗಳು 20:7). |

ಇಸ್ರಾಯೇಲ್ಯರಿಗೆ ಪಸ್ಕಹಬ್ಬವನ್ನು ನೀಡುವದರ ಮೂಲಕ, ದೇವರು ಕರ್ತನ ಭೋಜನದ ಸ್ಮರಣೆಯನ್ನು ಮುಂತಿಳಿಸಿದನು. ಈ ವಿಷಯದ ಕುರಿತು ಪೌಲನು "ಯಾಕೆಂದರೆ ನಮ್ಮ ಪಸ್ಕದ ಕುರಿಯು ಕೊಯಿದದೆ, ಅದಾವದೆಂದರೆ ಕ್ರಿಸ್ತನೇ" (1 ಕೊರಿಂಥ 5:7) ಎಂದಿರುವನು. ಹಬ್ಬದ ಕುರಿತು ಈ ವಿಧವಾದ ವ್ಯತ್ಯಾಸಗಳನ್ನು ಕಾಣಬಹುದು.